Sri S. NIJALINGAPPA.—If they come forward, we will consider it.

Sri H. R. KESHAVA MURTHY.—Are these concessions shown to various other industries apart from private ?

Sri S. NIJALINGAPPA.—It depends upon the quantum of energy that is used.

Sri H. R. KESHAVA MURTHY.—What is the percentage of concession shown for the consumption of current ?

Sri S. NIJALINGAPPA.—My friend can calculate and find out. It is a matter of calculation. He can find out the percentage very quickly.

Taking over of the Bus Stands by the Mysore State Road Transport Corporation.

*Q.—190. Sri B. CHANNABYRE GOWDA (Hoskote).—

Will the Government be pleased to state:—

(*a*) whether it is a fact that the Mysore State Road Transport Corporation have proposed to take up the Bus Stands to their control in the State ;

(*b*) whether they are aware that such an action would adversely affect the legitimate revenues of the Municipalities ;

(*c*) whether they propose to pay any compensation to the Municipalities in this behalf ?

A.—Sri D. DEVARAJ URS (Minister for Labour, Housing and Transport).—

(*a*) Yes, in some cases.

(*b*) No.

(*c*) Yes, if Bus Stands are taken over by Mysore State Road Transport Corporation.

ಶ್ರೀ ಬಿ. ಚನ್ನಬೈರೇಗೌಡ.—ಬಸ್ ನಿಲ್ದಾಣಗಳಿಂದ ಪೌರಸಭೆಗಳಿಗೆ ಸ್ವಲ್ಪ ಆದಾಯ ಬರುತ್ತದೆ ಎಂದು ಹೇಳಿ ಅವನ್ನು ಹಿಂದೆ ಅವರ ಅಧೀನದಲ್ಲಿ ಕೊಟ್ಟಿದ್ದರಲ್ಲವೆ ?

ಶ್ರೀ ಡಿ. ದೇವರಾಜ ಅರಸ್.—ಹೌದು. ಹಳೇ ಮೈಸೂರು ಭಾಗದಲ್ಲಿ ನ್ಯಾಷನಲೈಜೇಷನ್ ಇಲ್ಲದೇ ಇದ್ದಾಗ ಪೌರಸಭೆಯವರಿಗೆ ಬಸ್ ನಿಲ್ದಾಣಗಳನ್ನು ಕೊಟ್ಟಿದ್ದರು. ಕೊಟ್ಟ ಕಾಲಕ್ಕೆ ಬಸ್ ಒಂದಕ್ಕೆ 4 ಆಣೆ ವರೆಗೂ ಚಾರ್ಜ್ ಮಾಡಬಹುದು ಎಂದು ಮಾಡಿದ್ದರು.

ಶ್ರೀ ಬಿ. ಚನ್ನಬೈರೇಗೌಡ.—ಪೌರಸಭೆಗಳವರು ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಬಸ್ ನಿಲ್ದಾಣಗಳನ್ನು ಕಟ್ಟಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಡಿ. ದೇವರಾಜ ಅರಸ್.—ಲಕ್ಷಾಂತರ ರೂಪಾಯಿ ಖರ್ಚು ಮಾಡಿರುವವರು ಯಾರೂ ಇಲ್ಲ. ಸಾವಿರಾರು ರೂಪಾಯಿಗಳ ಖರ್ಚಿನಲ್ಲಿ ಕಟ್ಟಿದ್ದು ಕೆಲವೂ ಇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಬಸ್‌ಸ್ಟ್ಯಾಂಡ್‌ಗಳನ್ನು ತೆಗೆದು ಕೊಂಡದ್ದರಿಂದ ಪೌರಸಭೆಗಳ ಹಣಕಾಸಿನ ಮೇಲೆ ಅಡ್ವರ್ಸ್ effect—ಆಗಿಲ್ಲ ಎಂದು ಯಾವ ಆಧಾರದ ಮೇಲೆ ಆ ತೀರ್ಮಾನಕ್ಕೆ ಬಂದಿರಿ ?

ಶ್ರೀ ಡಿ. ದೇವರಾಜ ಅರಸ್.—ಲೆಕ್ಕಾಚಾರ ಹಾಕಿ ಆ ತೀರ್ಮಾನಕ್ಕೆ ಬಂದಿದ್ದೇವೆ. ಬಹಳ ಬಸ್ಸುಗಳು ಒಂದು ಕಡೆ ಕೇಂದ್ರೀಕೃತವಾಗುವ ಸ್ಥಳದಲ್ಲಿ ಒಂದು ದಿವಸಕ್ಕೆ 10-15 ರೂಪಾಯಿ ಬರುತ್ತದೆ. ಒಂದು ತಿಂಗಳಿಗೆ ನೂರಾರು ರೂಪಾಯಿ ಇರುತ್ತದೆ. ಇದು ಮುನಿಸಿಪಾಲಿಟಿಗೆ

(ಶ್ರೀ ಡಿ. ದೇವರಾಜ ಅರಸ್)

ಆದಾಯ ಅಂತ ಅಲ್ಲ. ಬಸ್‌ಸ್ಟ್ಯಾಂಡ್‌ನಲ್ಲಿ ಹೆಚ್ಚು ಹೆಚ್ಚು ಸೌಕರ್ಯ ಕಲ್ಪಿಸಿಕೊಡುವುದನ್ನು ಮತ್ತು ಬಸ್‌ಸ್ಟ್ಯಾಂಡ್ ಮೇಲೆ ಚೆಕ್‌ಪೋಸ್ಟ್‌ಗೂ ಈ ದುಡ್ಡು ಖರ್ಚು ಮಾಡಬೇಕೆಂದು ಮೂಲ ಉದ್ದೇಶದಿಂದ ಸರ್ಕಾರದವರು ಅಜ್ಜಿ ಕೊಟ್ಟಿದ್ದಾರೆಯೇ ಹೊರತು ಮುನಿಸಿಪಾಲಿಟಿಯವರ ಆದಾಯ ಹೆಚ್ಚಿಸಲಿಕ್ಕೆ ಅಲ್ಲ.

1-30 P.M.

Sri GANJI VEERAPPA.—In the case of bus stands, wherever proper facility is provided by the Municipality, may I know whether the Corporation is thinking of taking over these bus stands ?

ಶ್ರೀ ಡಿ. ದೇವರಾಜ್ ಅರಸ್.—ಈ ವಿಚಾರದಲ್ಲಿ 1960 ರಲ್ಲೇ ಸರ್ಕಾರದವರೊಂದು ಆಜ್ಞೆಯನ್ನು ಹೊರಡಿಸಿದ್ದಾರೆ. ಎಲ್ಲೆಲ್ಲಿ ಈ M. S. R. T. C. ಬಸ್ಸುಗಳು ಮುನಿಸಿಪಾಲಿಟಿಗಳನ್ನು ಚ್ ಮಾಡಿಕೊಂಡು ಹೋಗುತ್ತವೆಯೋ ಅಂಥ ಕಡೆ ಆ ಮುನಿಸಿಪಾಲಿಟಿಯವರು ಕಟ್ಟಿಸಿರತಕ್ಕ ಬಸ್ ಸ್ಟ್ಯಾಂಡ್‌ಗಳನ್ನು ಕಾರ್ಪೊರೇಷನ್ನಿಗೆ ತೆಗೆದುಕೊಳ್ಳಲು ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಆರ್ಡರ್ ಮಾಡಲಾಗಿದೆ. ಆದ್ದರಿಂದ ಇದರಲ್ಲಿ ನಮ್ಮ ಇಂಟರ್‌ಫಿಯರೆನ್ಸ್ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಈಗ ಈ ದುಡ್ಡು ವಸೂಲ್ಮಾಡುವ ಕ್ರಮ ಬೇರೆ ಕಡೆಗಳಲ್ಲಿ ಇಲ್ಲವೇ ಇಲ್ಲ. ಈಗ ಎಲ್ಲ ಕಡೆಗಳಲ್ಲೂ ಬಸ್ ಲೈನುಗಳು ನ್ಯಾಷನಲೈಜ್ ಆಗಿವೆ.

ಶ್ರೀ ಬಿ. ಚನ್ನಬೈರೇಗೌಡ—ಚನ್ನಪಟ್ಟಣದಲ್ಲಿ ಈಗ 5 ಲಕ್ಷ ರೂಗಳನ್ನು ಖರ್ಚುಮಾಡಿ ಕಟ್ಟಿಸಿದ್ದಾರಲ್ಲ ಅವರ ಗತಿಯೇನು ?

Sri D. DEVARAJ URS.—On the very face of it, it is not correct, Sir

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ದಿವಸ ಈ ರೋಡ್ ಟ್ರಾನ್ಸ್‌ಪೋರ್ಟ್ ಬೇರೆ ಇನ್ನಿತರ ಪ್ರೈವೇಟ್ ಆಪರೇಟರುಗಳ ಸರ್ವೀಸ್ ಇದ್ದ ಹಾಗೆಯೇ. ಆದ್ದರಿಂದ ಇನ್ನು ಮುಂದೆ ನಮ್ಮ ಕಟ್ಟಡಗಳನ್ನು ನಾವೇ ಕಟ್ಟಿಸಿಕೊಳ್ಳುತ್ತೇವೆಂದು ಹೇಳಿದರೆ ಬೇರೆಯವರು ಹಾಗೇ ಅವರ ಇಷ್ಟ ಬಂದ ಹಾಗೆ ಅವರು ಕಟ್ಟಿಸಿಕೊಳ್ಳಬಹುದೆಂದು ಹೇಳಿದ ಹಾಗಾಯಿತು. ಆದರೆ ಈ ವಿಚಾರದಲ್ಲಿ ಸರ್ಕಾರದವರ ನೀತಿ ನೇಮಗಳೇನು ? ಈ ವಿಚಾರದಲ್ಲಿ ಮುನಿಸಿಪಾಲಿಟಿಗೂ ಸರ್ಕಾರಕ್ಕೂ ಅಗ್ರೀಮೆಂಟ್ ಆಗಿದೆಯೇ ? ಸರ್ಕಾರದವರ ಖಚಿತವಾದ ದೋರಣೆಯೇನು ?

ಶ್ರೀ ಡಿ. ದೇವರಾಜ ಅರಸ್.—ಈ M. S. R. T. C.ಗೂ ಇತರ ಖಾಸಗೀ ಬಸ್ ಮಾಲೀಕರುಗಳ ವಿಚಾರಕ್ಕೂ ಬಹಳ ವ್ಯತ್ಯಾಸವಿದೆ. ಆದರೆ ಈಗ M. S. R. T. C. ಸಂಸ್ಥೆ ಸರ್ಕಾರದ ಒಂದು ಅಂಗವಾಗಿದೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಈಗ ಈ ಬಸ್ ಸರ್ವೀಸ್ ಸಂಪೂರ್ಣವಾಗಿ ನ್ಯಾಷನಲೈಜ್ ಆಗಿರುವುದರಿಂದ—ಆ ಸಂಸ್ಥೆಯವರು ಅವರದೇ ಕಟ್ಟಡಗಳನ್ನು ಮಾಡಿಸಿಕೊಳ್ಳುತ್ತಿರುವುದರಿಂದ ಮುನಿಸಿಪಾಲಿಟಿಯವರಿಗೂ—ಇವರಿಗೂ ಏನೂ ಸಂಬಂಧವೇ ಇರಬೇಕಾಗಿಲ್ಲ. ಆದರೆ ಈ ಬಸ್ ಸ್ಟ್ಯಾಂಡುಗಳನ್ನು ಕಟ್ಟಿಸತಕ್ಕದ್ದು. ಮುನಿಸಿಪ್ಯಾಲಿಟಿಗಳ ಆದಾಯಕ್ಕಾಗಿ ಅಲ್ಲ. ಪ್ರಯಾಣಿಕರುಗಳ ಅನುಕೂಲಕ್ಕಾಗಿ.

Sri GANJI VEERAPPA.—Is it the intention of the Corporation to take over all bus stands or such of the bus stands where there are no facilities ?

ಶ್ರೀ ಡಿ. ದೇವರಾಜ ಅರಸ್.—ಈಗ ಎಲ್ಲೆಲ್ಲಿ ನ್ಯಾಷನಲೈಜ್ ಆಗಿರುತ್ತದೆಯೋ ಅಂಥಾ ಸ್ಥಳಗಳಲ್ಲಿ, ಎಲ್ಲೆಲ್ಲಿ 40-50 ಬಸ್‌ಗಳು ಸೇರತಕ್ಕಂಥ ಸ್ಥಳಗಳಿವೆಯೋ ಅಂಥಾ ಕಡೆ ನಮ್ಮ ಕಾರ್ಪೊರೇಷನ್ನಿನ ಬಸ್‌ಗಳು 30 ಪೀಗೆಲ್ಲ ಹೋಗುತ್ತಿದ್ದಾರೆ ಅಂಥಾ ಸ್ಥಳದಲ್ಲಿ ಪ್ರಯಾಣೀಕರಿಗೆ ಸೌಕರ್ಯ ಕಲ್ಪಿಸುವ ಜವಾಬ್ದಾರಿ ಕಾರ್ಪೊರೇಷನ್ನಿಗಿರುತ್ತದೆ. ಅಲ್ಲ ಅವರು ಸ್ಥಳ ತೆಗೆದುಕೊಂಡು ಅವರ ಸೌಕರ್ಯ ಅವರು ಮಾಡಿಕೊಳ್ಳಬೇಕೆಂದು ತಿಳಿಸಲಾಗಿದೆ.

ಶ್ರೀ ಕೆ. ಲಕ್ಕಪ್ಪ.—ಇಲ್ಲಿಯವರೆಗೆ ಎಷ್ಟು ಬಸ್ ಸ್ಟ್ಯಾಂಡುಗಳನ್ನು ತೆಗೆದುಕೊಳ್ಳಲಾಗಿದೆ ? ಇದಕ್ಕೆಷ್ಟು ಹಣ ಖರ್ಚಾಗಿದೆ.

ಶ್ರೀ ಡಿ. ದೇವರಾಜ ಅರಸ್.—ಯಾವುದನ್ನೂ ತೆಗೆದುಕೊಂಡಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಬಸ್ ಪ್ರಯಾಣೀಕರ ಅನುಕೂಲಕ್ಕಾಗಿ ಎಂದು ಹೇಳಿದರು. ಆದರೆ ಈಗ ಮುನಿಸಿಪ್ಯಾಲಿಟಿಯವರು ಗಾಡಿಗಳ ಮೇಲೆ ಬರತಕ್ಕ ದಿನಸಿ ಇತ್ಯಾದಿಗಳ ಬಗ್ಗೆ ಹಣ ವಸೂಲಾದ್ದು ಮುನಿಸಿಪ್ಯಾಲಿಟಿಗೆ ಹೋಗುತ್ತದೆ. ಅದನ್ನೂ ಸಹ ಆ ಜನರ ಅನುಕೂಲಕ್ಕಾಗಿ ಏಕೆ ಉಪಯೋಗಿಸಬಾರದು ?

ಶ್ರೀ ಡಿ. ದೇವರಾಜ ಅರಸ್.—ಗಾಡಿಗಳ ಮೇಲೆ ಬರತಕ್ಕ ಸಾಮಾನು ಸರಂಜಾಮುಗಳ ವಿಚಾರಕ್ಕೂ—ಈ ಬಸ್ ಪ್ರಯಾಣೀಕರ ವಿಚಾರಕ್ಕೂ ಅಜಗಜಾಂತರ ವ್ಯತ್ಯಾಸವಿದೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಇಲ್ಲಿಗೆ ನಮ್ಮ ಜಿಲ್ಲೆಯಲ್ಲಿ ಬಸ್ ನ್ಯಾಷನಲೈಜ್ ಆಗಿ ಒಂದು ವರ್ಷವಾದರೂ ಹಾಸನದಲ್ಲಿ ಒಂದು ಸರಿಯಾದ ಬಸ್ ಸ್ಟ್ಯಾಂಡ್ ಇಲ್ಲದೆ ಪ್ರಯಾಣಿಕರಿಗೆ ಬಹಳ ತೊಂದರೆಯಾಗಿದೆ, ಅಲ್ಲಿ ಒಂದು ಬಸ್‌ಸ್ಟಾಂಡ್ ಮಾಡಿಸುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್.—ಅಲ್ಲಿ ಈಗಾಗಲೇ ಒಂದು ದೊಡ್ಡ ಜಾಗವನ್ನು ಮುನಿಸಿಪ್ಯಾಲಿಟಿಯವರಿಂದ ತೆಗೆದುಕೊಳ್ಳಲಾಗಿದೆ. ಅದಕ್ಕೆ ದುಡ್ಡನ್ನೂ ಕೊಡಲಾಗಿದೆ. ಅಲ್ಲಿ ಒಂದು ಕೇಂದ್ರವನ್ನು ಕಟ್ಟತಕ್ಕ ಏರ್ಪಾಡಿದೆ.

ಶ್ರೀ ಎಕ್. ಹುಚ್ಚಮಾಸ್ತಿಗೌಡ.—ಈ ಬಸ್ ಸ್ಟ್ಯಾಂಡುಗಳಲ್ಲಿ ತಿಂಗಳಿಗೆ ಎಷ್ಟು ಹಣ ವಸೂಲ್ಮಾಡಬೇಕು, ಅವುಗಳನ್ನು ಯಾವ ಷರತ್ತುಗಳ ಪ್ರಕಾರ ಮೈನ್‌ಟೈನ್ ಮಾಡಬೇಕು ಎಂಬ ಈ ಷರತ್ತುಗಳೇನಿವೆ, ಆ ಷರತ್ತುಗಳ ಪ್ರಕಾರವೇ ಈಗ ಈ ಬಸ್ ಸ್ಟ್ಯಾಂಡುಗಳನ್ನು ಮೈನ್‌ಟೈನ್ ಮಾಡಲಾಗುತ್ತಿದೆಯೇ ?

ಶ್ರೀ ಡಿ. ದೇವರಾಜ್ ಅರಸ್.—ಇಲ್ಲ.

ಶ್ರೀ ಬಿ. ಚನ್ನಬ್ಯೈರೇಗೌಡ.—ಈಗ ಕೆಲವು ಬಸ್ ಸ್ಟ್ಯಾಂಡುಗಳಲ್ಲಿರತಕ್ಕ ರೆಸ್ಟೊರೆಂಟ್ ಷಾಪುಗಳು ಇತ್ಯಾದಿಗಳೆಲ್ಲ ಇವೆ. ಇವುಗಳಿಗೆಲ್ಲ ಕಾಂಪನ್‌ಸೇಷನ್ ಯಾವ ರೀತಿ ಕೊಡುತ್ತಾರೆ ?

ಶ್ರೀ ಡಿ. ದೇವರಾಜ್ ಅರಸ್.—ಬಿಲ್ಡಿಂಗ್‌ಗಳನ್ನು ಎಸ್ಟಿಮೇಟ್ ಮಾಡಿಸಿ ಅದರ ಪ್ರಕಾರ ದುಡ್ಡು ಕೊಡಲಾಗುತ್ತದೆ.

ಶ್ರೀ ಇ. ನಾರಾಯಣಗೌಡ.—ಈ ಬಸ್ ಸ್ಟ್ಯಾಂಡುಗಳ ಸ್ಯಾನಿಟರಿ ವ್ಯವಸ್ಥೆ ಪಗೈರೆಗಳನ್ನು ನೀವು ನೋಡಿಕೊಳ್ಳುತ್ತೀರೋ ? ಅಥವಾ ಮುನಿಸಿಪ್ಯಾಲಿಟಿಯವರು ನೋಡಿ ಕೊಳ್ಳುತ್ತಾರೋ ?

ಶ್ರೀ ಡಿ. ದೇವರಾಜ ಅರಸ್.—ಮುನಿಸಿಪ್ಯಾಲಿಟಿಯವರು ನೀರನ್ನೊದಗಿಸುತ್ತಾರೆ, ವಿದ್ಯುಚ್ಛಕ್ತಿಯನ್ನು ವಿದ್ಯುಚ್ಛಕ್ತಿ ಇಲಾಖೆಯವರು ಒದಗಿಸುತ್ತಾರೆ, ಅಲ್ಲಿಯ ಸ್ಥಳ ನೈರ್ಮಲ್ಯವನ್ನು ಕಾರ್ಪೊರೇಷನ್ನಿನವರು ನೋಡಿಕೊಳ್ಳುತ್ತಾರೆ.

Villages that are without Schools in Hoskote Taluk.

*Q.—192. Sri B. CHANNABYRE GOWDA (Hoskote).—

Will the Government be pleased to state :—

(*a*) the number of villages that are without schools in Hoskote Taluk ;

(*b*) whether they have received any proposals to start schools in Hoskote Taluk ;

(*c*) if so, the action taken by them to start schools in the villages of Hoskote Taluk ?

A.—Smt. GRACE TUCKER (Deputy Minister for Education).—

(*a*) 6.
(*b*) Yes.